## ಸಂಪಿಗೆ ಕಂಪಿನ ಸಮಯ



ಎರಡು ವರ್ಷಗಳ ಅಂತರದ ನಂತರ ಬಿಡುಗಡೆ ಆಗುತ್ತಿರುವ ಸೂರಿ ನಿರ್ದೇಶನದ ಸಿನಿಮಾ 'ಕೆಂಡ ಸಂಪಿಗೆ'. ಇದು, 2013ರಲ್ಲಿ ತೆರೆ ಕಂಡಿದ್ದ 'ಕಡ್ಡಿಪುಡಿ' ನಂತರ ಸೂರಿ ಸಾಕಷ್ಟು ಸಮಯ ತೆಗೆದುಕೊಂಡು ರೂಪಿಸಿರುವ ಸಿನಿಮಾ. ಯಾರೋ ಮಾಡಿದ ತಪ್ಪಿಗೆ ಯಾರೋ ಶಿಕ್ಷೆ ಅನುಭವಿಸುವ ವಿಪರ್ಯಾಸದ ಕಥೆಯ ಈ ಸಿನಿಮಾ ಕ್ರೈಂ ಥ್ರಿಲ್ಲರ್ ಪ್ರಿಯರಿಗೆ ರಸದೌತಣ ಎನ್ನಿಸಲಿದೆ.

'ಕೆಂಡ ಸಂಪಿಗೆ' ಚಿತ್ರದ ಗೀತೆಗಳು ಸಹೃದಯರ ಗಮನಸೆಳೆದಿರುವುದು ಕೂಡ ಚಿತ್ರದ ಕುರಿತ ನಿರೀಕ್ಷೆಗಳನ್ನು ಹೆಚ್ಚಿಸಿದೆ. ಬಹುತೇಕ ಹೊಸ ನಟನಟಿಯರು ಅಭಿನಯಿಸಿರುವುದು ಚಿತ್ರದ ವಿಶೇಷ. 'ಕಡ್ಡಿಪುಡಿ' ಚಿತ್ರದಲ್ಲಿ ಪುಟ್ಟ ಪಾತ್ರದಲ್ಲಿ ನಟಿಸಿದ್ದ ಸಂತೋಷ್ ರೇವಾ ಈ ಚಿತ್ರದ ನಾಯಕ. ರೇಡಿಯೊ ಜಾಕಿ ಆಗಿದ್ದ ಕರಾವಳಿ ಹುಡುಗಿ ಮಾನ್ವಿತಾ ಹರೀಶ್ ಚಿತ್ರದ ನಾಯಕಿ. ಇಬ್ಬರೂ ಸ್ಪರ್ಧೆಗೆ ಬಿದ್ದಂತೆ ನಟಿಸಿದ್ದಾರಂತೆ.

ಸಂತೋಷ್ ಹಾಗೂ ಮಾನ್ವಿತಾ ಅವರಿಗೆ ಸೂರಿ ಸಿನಿಮಾ ಅಚ್ಚರಿಯ ಪಯಣ ಎನ್ನಿಸಿದೆ. ಈ ಸಿನಿಮಾಕ್ಕೆ ಆಯ್ಕೆಯಾದುದು ಇಬ್ಬರಿಗೂ ಆಕಸ್ಮಿಕ ಎನ್ನಿಸಿದೆ. ಸೂರಿ ಅವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಸಂತೋಷ್ ಪುಟ್ಟ ಪಾತ್ರಗಳಲ್ಲೇ ಖುಷಿ ಕಂಡವರು. ನಿರ್ದೇಶಕ ಆಗಬೇಕು ಎನ್ನುವುದು ಅವರ ಕನಸು. ಇಂಥ ಕನಸುಕಂಗಳ ಹುಡುಗನಲ್ಲಿ ತಮ್ಮ ಚಿತ್ರದ ನಾಯಕನ ಚಹರೆ ಸೂರಿ ಅವರಿಗೆ ಕಾಣಿಸಿದೆ. ಮಾನ್ವಿತಾ ಅವರ ಕಥೆಯೂ ಭಿನ್ನವೇನೂ ಅಲ್ಲ. ರೇಡಿಯೊ ಜಾಕಿ ಆಗಿ ಕೆಲಸ ಮಾಡುತ್ತಿದ್ದ ಅವರಿಗೆ ಆಡಿಷನ್ ಎದುರಿಸಿ ಬಂದದ್ದಷ್ಟೇ ಗೊತ್ತು. ಗಾಡ್‌ಫಾದರ್‌ಗಳಿಲ್ಲದ ಹುಡುಗಿಯೊಬ್ಬಳು ಪ್ರತಿಭೆಯಿಂದಷ್ಟೇ ಅವಕಾಶ ಪಡೆಯುವುದು ಚಿತ್ರರಂಗದಲ್ಲಿ ಕಡಿಮೆ ಸಾಧನೆಯೇನಲ್ಲ. ಆದರೆ, ಮಾನ್ವಿತಾ ಅವರಿಗೆ ಅಪಾರ ಆತ್ಮವಿಶ್ವಾಸವಿದೆ. ಬಯಲುಸೀಮೆ, ಕರಾವಳಿ– ಯಾವ ಕನ್ನಡವಾದರೂ ನ್ಯಾಯ ನೀಡಬಲ್ಲೆ ಎನ್ನುವ ಛಾತಿ ಅವರದು.

ಸೂರಿ ಅವರ ನೆಚ್ಚಿನ ಛಾಯಾಗ್ರಾಹಕರಾದ ಸತ್ಯ ಹೆಗಡೆ 'ಕೆಂಡಸಂಪಿಗೆ'ಯಲ್ಲೂ ಕ್ಯಾಮೆರಾ ನಿರ್ವಹಿಸಿದ್ದಾರೆ. ಹರಿಕೃಷ್ಣ ಸಂಗೀತ ಸಂಯೋಜನೆಯಲ್ಲಿ ಜಯಂತ ಕಾಯ್ಕಿಣಿ ಹಾಗೂ ಯೋಗರಾಜ ಭಟ್ ಗೀತೆಗಳನ್ನು ಬರೆದಿದ್ದಾರೆ. ಸೆಪ್ಟೆಂಬರ್ 4ರಂದು ತೆರೆ ಕಾಣುತ್ತಿರುವ ಈ ಸಿನಿಮಾ ಮೂಲಕ ಹಲವು ಹೊಸಬರು ತಮ್ಮ ಅದೃಷ್ಟವನ್ನು ಪರೀಕ್ಷೆಗೊಡ್ಡುತ್ತಿದ್ದಾರೆ.

## ರತ್ನಜ ಹೊಸ ಪ್ರೇಮಪರ್ವ!

ಹೊಸಬರು ಮತ್ತು ಹಳಬರ ತಂಡವೊಂದನ್ನು ಕಟ್ಟಿಕೊಂಡು ನಿರ್ದೇಶಕ ರತ್ನಜ ಮತ್ತೆ ಗಾಂಧಿನಗರದಲ್ಲಿ ಸುದ್ದಿಯಲ್ಲಿದ್ದಾರೆ. ಅವರ ನಿರ್ದೇಶನದ 'ಪ್ರೀತಿಯಲ್ಲಿ ಸಹಜ' ಚಿತ್ರ ತೆರೆಗೆ ಸಿದ್ಧವಾಗಿದ್ದು, ಚಿತ್ರದ ಗೀತೆಗಳು ಈಗ ಪೇಟೆಯಲ್ಲಿವೆ. ರತ್ನಜ ಅವರ ಸಿನಿಮಾಗಳ ಟ್ರೇಡ್ ಮಾರ್ಕ್‌ಗಳಾದ ಸದಭಿರುಚಿ ಹಾಗೂ ರಂಜನೆ ಹೊಸ ಚಿತ್ರದಲ್ಲೂ ಧಾರಾಳವಾಗಿದೆಯಂತೆ.

'ಪ್ರೀತಿಯಲ್ಲಿ ಸಹಜ'– ಹೆಸರೇ ಹೇಳುವಂತೆ ಪ್ರೇಮ ಕಥೆಯ ಸಿನಿಮಾ. 'ಪ್ರೇಮಿಸಂ' ಚಿತ್ರ ರತ್ನಜ ಅವರ ನಿರೀಕ್ಷೆಯ ಮಟ್ಟಕ್ಕೆ ಮುಟ್ಟಲಿಲ್ಲ. ಆ ಚಿತ್ರದ ನಿರಾಶೆಯನ್ನು ಮರೆತು ಅವರು ಮತ್ತೆ ಪ್ರೇಮದ ಹೊಸ ಸಾಧ್ಯತೆಯನ್ನು 'ಪ್ರೀತಿಯಲ್ಲಿ ಸಹಜ' ಚಿತ್ರದಲ್ಲಿ ಹುಡುಕುವ ಪ್ರಯತ್ನ ನಡೆಸಿದ್ದಾರೆ. ಈ ಚಿತ್ರದ ಮೂಲಕ ಸೂರ್ಯ ಮತ್ತು ಅಕ್ಷಾ ಭಟ್ ಎನ್ನುವ ಹೊಸ ನಾಯಕ – ನಾಯಕಿ ಚಿತ್ರರಸಿಕರಿಗೆ ಪರಿಚಿತರಾಗುತ್ತಿದ್ದಾರೆ. ಹೊಸಬರ ಜೊತೆಗೆ ಸುಹಾಸಿನಿ, ದೇವರಾಜ್, ರಘು ಮುಖರ್ಜಿ ಅವರಂಥ ಖ್ಯಾತನಾಮರೂ ತಾರಾಗಣದಲ್ಲಿದ್ದಾರೆ.

ರವಿರಾಜ್ ಸಂಗೀತ, ಅನಂತ ಅರಸ್ ಛಾಯಾಗ್ರಹಣ ರತ್ನಜ ಅವರ ಚಿತ್ರಕ್ಕಿದೆ. ಸೆಪ್ಟೆಂಬರ್ ತಿಂಗಳಲ್ಲಿಯೇ ಚಿತ್ರವನ್ನು ತೆರೆ ಕಾಣಿಸಲು ಚಿತ್ರತಂಡ ಪ್ರಯತ್ನಿಸುತ್ತಿದೆ.

■ ರಘು



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65